UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
Email- librarian@uasbangalore.edu.in
11-08-2026
Tuesday

ಸಿಹಿನೀರಿನ ಏಡಿ ಪ್ರಭೇದ ಪತ್ತೆ

ವಿಜಯವಾಣಿ ಚಿತ್ರ



ಉಡುಪಿ: ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯದಲ್ಲಿ ಸಿಹಿನೀರಿನ ಏಡಿ ಹೊಸ ಪ್ರಭೇದ ಪತ್ತೆಯಾಗಿದೆ. ಕೊಲ್ಲೂರು ಸಮೀಪದ ಮಾವಿನಕಾರು ಪ್ರದೇಶದಲ್ಲಿ ಸಿಹಿನೀರಿನ ಏಡಿ ಪತ್ತೆಯಾಗಿದ್ದು, ಇದಕ್ಕೆ ಘಾಟಿಯಾನ ಕರ್ನಾಟಕ ಎಸ್‌ಪಿ.ನವ್. ಎಂದು ವೈಜ್ಞಾನಿಕವಾಗಿ ಹೆಸರಿಸಲಾಗಿದೆ. ಈ ಹೊಸ ಪ್ರಭೇದ ಪಶ್ಚಿಮಘಟ್ಟಗಳಲ್ಲಿರುವ ವಿಶಿಷ್ಟ ಹಾಗೂ ಸ್ಥಳೀಯ ಸಿಹಿನೀರಿನ ಏಡಿ ವೈವಿಧ್ಯಕ್ಕೆ ಮಹತ್ವದ ಸೇರ್ಪಡೆಯಾಗಿದೆ. ಘಾಟಿಯಾನ ಕುಲದಲ್ಲಿ ಈವರೆಗೆ 14 ಪ್ರಭೇದಗಳು ಗುರುತಿಸಲ್ಪಟ್ಟಿದ್ದವು. ಕರ್ನಾಟಕದಲ್ಲಿ ಈ ಪ್ರಭೇದಗಳ ಸಂಖ್ಯೆ 8ಕ್ಕೆ ತಲುಪಿದೆ.

Vijayavani Pg.07

ವಿಜಯಪುರದಲ್ಲಿ ಸರಾಸರಿ ₹5 ಕೋಟಿಯಿಂದ ₹12 ಕೋಟಿಗೆ ವಹಿವಾಟು ಏರಿಕೆ

ಒಣದ್ರಾಕ್ಷಿ ಆನ್‌ಲೈನ್ ಮಾರುಕಟ್ಟೆಗೆ ಶುಕ್ರದೆಸೆ

• ಬಸವರಾಜ್ ಸಂಪಳ್ಳಿ

ವಿಜಯಪುರ: ನಗರದಲ್ಲಿರುವ ಒಣದ್ರಾಕ್ಷಿ ಆನ್‌ಲೈನ್ ಟ್ರೇಡಿಂಗ್ ಮಾರುಕಟ್ಟೆಗೆ ಏಕಾಏಕಿ ಶುಕ್ರದೆಸೆ ಬಂದಿದೆ. ಈವರೆಗೆ ನಡೆಯುತ್ತಿದ್ದ ಸರಾಸರಿ ₹ 5 ಕೋಟಿ ವಹಿವಾಟು ಇದೀಗ ₹ 12 ಕೋಟಿಗೆ ಏರಿಕೆಯಾಗಿದೆ.

ಆಗಸ್ಟ್ 1ರಂದು ನಡೆದ ಆನ್‌ಲೈನ್ ಮಾರುಕಟ್ಟೆ ಪ್ರಕ್ರಿಯೆಯಲ್ಲಿ 4.59 ಲಕ್ಷ ಕೆಜಿ ಒಣದ್ರಾಕ್ಷಿ ವಹಿವಾಟು ನಡೆದಿದೆ. ಇದಕ್ಕೂ ಮೊದಲೂ ಕೇವಲ 2.17 ಲಕ್ಷ ಕೆಜಿ ವಹಿವಾಟು ದಾಖಲಾಗಿತ್ತು.

ದರದಲ್ಲೂ ಏರಿಕೆಯಾಗಿದ್ದು, ಪ್ರತಿ ಕೆಜಿ ಒಣದ್ರಾಕ್ಷಿಗೆ ₹370ರಿಂದ ₹390ಕ್ಕೆ ಏರಿಕೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಇಲ್ಲಿಯವರೆಗೆ ಭಾಗವಹಿಸುತ್ತಿದ್ದ ಖರೀದಿದಾರರ ಸಂಖ್ಯೆ 14 ರಿಂದ 25ಕ್ಕೆ ಹೆಚ್ಚಳವಾಗಿದೆ. ದಲ್ಲಾಳಿಗಳ ಸಂಖ್ಯೆ 5 ರಿಂದ 15ಕ್ಕೆ ಅಧಿಕವಾಗಿದೆ.

ಮುಖ್ಯಾಂಶಗಳು

- ಆನ್‌ಲೈನ್ ವಹಿವಾಟಿಗೆ ಉತ್ತಮ ಪ್ರತಿಕ್ರಿಯೆ
- ಕೆಲವೇ ವ್ಯಕ್ತಿಗಳ ಕಪಿಮುಷ್ಟಿಯಿಂದ ಮುಕ್ತಿ
- ಸರ್ಕಾರದ ಬೊಕ್ಕಸಕ್ಕೆ ಬರುತ್ತಿದೆ ಆದಾಯ

'ಪಾರದರ್ಶಕ ವಹಿವಾಟಿಗಾಗಿ ಆರಂಭಿಸಲಾಗಿದ್ದ ಆನ್‌ಲೈನ್ ಟ್ರೇಡಿಂಗ್ ಮಾರುಕಟ್ಟೆಗೆ ಪರ್ಯಾಯವಾಗಿ ಕೆಲ ವ್ಯಕ್ತಿಗಳು ಖಾಸಗಿ ಅಸೋಷಿಯನ್ ರಚಿಸಿ, ಎಪಿಎಂಸಿಗೆ ಸಂಬಂಧವೇ ಇಲ್ಲದಂತೆ ತಮ್ಮದೆ ಆದ ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದರು. ಕೆಲವೇ ವ್ಯಕ್ತಿಗಳು ಹರಾಜಿನಲ್ಲಿ ಭಾಗವಹಿಸಿ ಮನಸ್ಸಿಗೆ ಬಂದ ದರದಲ್ಲಿ ಖರೀದಿಸಿ, ಒಣದ್ರಾಕ್ಷಿ ವಹಿವಾಟಿನ ಸಾಂದರ್ಭಿಕ ಚಿತ್ರ



ಮಾರುಕಟ್ಟೆಯನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದರು' ಎಂದು ರೈತರು ಹೇಳುತ್ತಾರೆ.

ಯತ್ನಾಳ ಮಧ್ಯ ಪ್ರವೇಶ: ಮಾರುಕಟ್ಟೆ ಅವ್ಯವಸ್ಥೆಗೆ ಕಡಿವಾಣ ಹಾಕಲು ಈಚೆಗೆ ಎಪಿಎಂಸಿ ಪ್ರಾಂಗಣದಲ್ಲಿ ದ್ರಾಕ್ಷಿ ಬೆಳೆಗಾರರು ಮತ್ತು ಎಪಿಎಂಸಿ ಅಧಿಕಾರಿಗಳೊಂದಿಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಭೆ ನಡೆಸಿದರು. 'ಆನ್‌ಲೈನ್ ಟ್ರೇಡಿಂಗ್ ಮಾರುಕಟ್ಟೆಗೆ ಅದ್ಯತೆ ನೀಡಲು ಕಡ್ಡಾಯವಾಗಿ ವಾರದಲ್ಲಿ ಎರಡು ಬಾರಿ ಆನ್‌ಲೈನ್ ಟ್ರೇಡಿಂಗ್ ಮಾರುಕಟ್ಟೆಯಲ್ಲೇ ಒಣದ್ರಾಕ್ಷಿ ವಹಿವಾಟು ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದರಿಂದ ಹಂತಹಂತವಾಗಿ ಎಲ್ಲವೂ ಬದಲಾಯಿತು.

'ಖಾಸಗಿಯವರು ನಡೆಸುತ್ತಿದ್ದ ಬಹಿರಂಗ ಹರಾಜಿನಲ್ಲೇ ಹೆಚ್ಚಿನ ಪ್ರಮಾಣದಲ್ಲಿ ವಹಿವಾಟು ಆಗುತ್ತಿತ್ತು. ನಿಖರ ಮಾಹಿತಿ ಸಿಗುತ್ತಿರಲಿಲ್ಲ. ಸರ್ಕಾರಕ್ಕೆ ಸೆಸ್ ಮತ್ತು ಜಿಎಸ್‌ಟಿ ಮೂಲಕ ಬರಬೇಕಿದ್ದ ಆದಾಯ ಕೈ ತಪ್ಪುತ್ತಿತ್ತು. ಈಗ ಆನ್‌ಲೈನ್ ಮಾರುಕಟ್ಟೆಯಲ್ಲೇ ಹೆಚ್ಚಿನ ವಹಿವಾಟು ನಡೆಯುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಆದಾಯ ಹರಿದು ಬರತೊಡಗಿದೆ' ಎಂದು ಯತ್ನಾಳ ತಿಳಿಸಿದ್ದಾರೆ.

> ದ್ರಾಕ್ಷಿ ಬೆಳೆಗಾರರು ಯಾವ ಲಾಬಿಗೂ ಮಣಿಯದೆ ನಿರಾತಂಕವಾಗಿ ಆನ್‌ಲೈನ್ ಮಾರುಕಟ್ಟೆಯಲ್ಲಿ ಭಾಗವಹಿಸಬೇಕು, ಎಪಿಎಂಸಿಗೂ ಆದಾಯ ಮತ್ತು ರೈತರಿಗೂ ಅತಿ ಹೆಚ್ಚು ಲಾಭ ದೊರೆಯಲಿದೆ
> **ಬಸನಗೌಡ ಪಾಟೀಲ ಯತ್ನಾಳ**
> ಶಾಸಕ, ವಿಜಯಪುರ

> ದೇಶದ ಯಾವುದೇ ರಾಜ್ಯದ ವರ್ತಕರು ಆನ್‌ಲೈನ್ ಮತ್ತು ತಾತ್ಕಾಲಿಕವಾಗಿ ನಡೆಯುವ ಆಫ್‌ಲೈನ್ ಮಾರುಕಟ್ಟೆ ವಹಿವಾಟಿನಲ್ಲಿ ಭಾಗವಹಿಸಲು ಅವಕಾಶವಿದ್ದು, ಪ್ರತಿಯೊಬ್ಬರೂ ಇದರ ಪ್ರಯೋಜನ ಪಡೆಯಬೇಕು
> **ಅಲ್ಲಾಬಕ್ಷ ಬಿಜಾಪುರ**
> ಕಾರ್ಯದರ್ಶಿ, ಎಪಿಎಂಸಿ, ವಿಜಯಪುರ

Prajavani Pg.08

ಸಸಿಗಳ ನಿರ್ವಹಣೆಗೆ ವೆಬ್ ಪೋರ್ಟಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಗಿನ್ನೆಸ್ ವಿಶ್ವ ದಾಖಲೆಯ ನೆಡುತೋಪು ಅಭಿಯಾನದ ಸಮಯದಲ್ಲಿ ನೆಡಲಾದ ಸಸಿಗಳ ನಿರ್ವಹಣೆ, ಮೇಲ್ವಿಚಾರಣೆ ಮಾಹಿತಿ ಕಲೆ ಹಾಕಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲು ಮುಂದಾಗಿದೆ.

ರಾಜಧಾನಿಯ ಪರಿಸರ ಮರುಸ್ಥಾಪನೆಗಾಗಿ ಜೂನ್ 27ರಂದು ಪ್ರಾಧಿಕಾರದ ವ್ಯಾಪ್ತಿಯ ಡಾ.ಶಿವರಾಮ ಕಾರಂತ ಬಡಾವಣೆಯ 80, ನಾಡಪ್ರಭು ಕೆಂಪೇಗೌಡ ಬಡಾವಣೆಯ 41 ಮತ್ತು ಬನಶಂಕರಿ 6ನೇ ಹಂತದ ಬಡಾವಣೆಯ 10 ಸೇರಿ ಒಟ್ಟು 131 ಸ್ಥಳ ಹಾಗೂ 244 ಎಕರೆ ಜಾಗದಲ್ಲಿ ಮಿಯಾವಾಕಿ ಮಾದರಿಯಲ್ಲಿ 15 ಲಕ್ಷ ಸ್ಥಳೀಯ, ಪೊದೆ ರಚನೆ ಹಾಗೂ ಔಷಧ ಗಿಡಗಳನ್ನು ನೆಡಲಾಯಿತು. ಆದರೆ, ನೆಟ್ಟ 15 ದಿನಗಳಲ್ಲಿ ಅವುಗಳ ನಿರ್ವಹಣೆಯತ್ತ ಸರಿಯಾಗಿ ಗಮನಹರಿಸದ ಹಿನ್ನೆಲೆಯಲ್ಲಿ ಕೆಲವೆಡೆ ಒಣಗಲು ಆರಂಭಿಸಿದವು. ಪರಿಣಾಮ, ನಾಗರಿಕ ವಲಯದಿಂದ ಸಾಕಷ್ಟು ಟೀಕೆಗಳೂ ವ್ಯಕ್ತವಾಗಿದ್ದವು. ಬಳಿಕ ಪ್ರಾಧಿಕಾರ, ಎಂಜಿನಿಯರ್‌ಗಳಿಗೆ ನಿರಂತರ ಮೇಲ್ವಿಚಾರಣೆ ನಡೆಸಲು ಸೂಚಿಸಿತು. ಅಲ್ಲದೆ, ನಿರ್ವಹಣಾ ಜವಾಬ್ದಾರಿ ಹೊತ್ತಿರುವ ಎನ್‌ಜಿಒಗಳಿಗೆ ಸಮರ್ಪಕವಾಗಿ ನಿರ್ವಹಣೆ ಮಾಡಬೇಕೆಂದು



ನಿರ್ದೇಶನ ನೀಡಿತು. ಇದರ ಬೆನ್ನಲ್ಲೇ ಗಿಡಗಳ ಸ್ಥಿತಿಗತಿ ಟ್ಯಾಕಿಂಗ್ ಮಾಡಲು 'ಪೋಸ್ಟ್ ಇವೆಂಟ್ ಮೆಬ್‌ಸೈಟ್' ಅಭಿವೃದ್ಧಿಪಡಿಸಲು ನಿರ್ಧರಿಸಿದೆ.

ಈ ಪೋರ್ಟಲ್ ಅಭಿಯಾನದ ಸಮಯದಲ್ಲಿ ನೆಡಲಾದ ಸಸಿಗಳ ಸ್ಥಿತಿಗತಿ, ದಿನಗಳವಾರು, ಸ್ಥಳವಾರು ನಿರ್ವಹಣಾ ದಾಖಲೆ ಹಾಗೂ ಸಸಿಗಳ ಆರೋಗ್ಯದ ಟ್ಯಾಕಿಂಗ್ ಪ್ರದರ್ಶಿಸುತ್ತದೆ. ಇದು ಪ್ರತಿ ನೆಡುತೋಪು ಸ್ಥಳದ ಜಿಪಿಎಸ್ ಲೊಕೇಶನ್, ಅದರ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿರುವ ಎನ್‌ಜಿಒಗಳ ವಿವರಗಳು ಮತ್ತು ಸಸಿಗಳ ಆರೋಗ್ಯದ ಸ್ಥಿತಿಯನ್ನು ಸಹ ಒಳಗೊಂಡಿರುತ್ತದೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆ ಖಚಿತಪಡಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ.

ಸಾರ್ವಜನಿಕರ ಮಾಹಿತಿ ಲಭ್ಯ: ಇದು ಸಾರ್ವಜನಿಕರ ಸಹಭಾಗಿತ್ವದಲ್ಲಿ ನಡೆದಿರುವ ಅಭಿಯಾನವಾಗಿದೆ. ಹಾಗಾಗಿ, ಅವರು ನೆಟ್ಟಿರುವ ಗಿಡಗಳ ಸ್ಥಿತಿಗತಿ, ಹೇಗೆ ಬೆಳೆಯುತ್ತಿದೆ ಎಂಬ ಬಗ್ಗೆ ಅವರಿಗೂ ಮಾಹಿತಿ ನೀಡುವುದು ಅಗತ್ಯವಾಗಿದೆ. ಆದ್ದರಿಂದ, ನಾಗರಿಕರು ಈ ಉಪಕ್ರಮವನ್ನು ಮೇಲ್ವಿಚಾರಣೆ ಮಾಡುವ ರೀತಿಯಲ್ಲಿ ಈ ಡಿಜಿಟಲ್ ವೇದಿಕೆಯನ್ನು ಸಾರ್ವಜನಿಕವಾಗಿ ಇರಿಸಲಾಗುವುದು. ಅಲ್ಲದೆ, ಈ ಪೋರ್ಟಲ್ ಮೂಲಕ ನಾಗರಿಕರು ಅಧಿಕಾರಿಗಳೊಂದಿಗೆ ಸಂವಹನ ನಡೆಸಲು, ಗಿಡಗಳ ನಿರ್ವಹಣೆ ಬಗ್ಗೆ ದೂರು ಸಲ್ಲಿಸಲು ಅವಕಾಶ, ಎನ್‌ಜಿಒಗಳು ಮತ್ತು ಸಂಸ್ಥೆಗಳು ನೆಡುತೋಪು ಸ್ಥಳಗಳನ್ನು ದತ್ತು ಪಡೆಯಲು, ಸ್ಥಳೀಯ ನಿವಾಸಿಗಳು ಸ್ವಯಂಸೇವಕರಾಗಲು, ಸ್ಥಳೀಯ ಸಸಿಗಳು, ಬೀಜಗಳು ಮತ್ತು ಕಾಂಪೋಸ್ಟ್ ಗೊಬ್ಬರವನ್ನು ಕೊಡುಗೆಯಾಗಿ ನೀಡುವುದಕ್ಕೆ ಅರ್ಜಿ ಸಲ್ಲಿಸಲು ಅವಕಾಶವಾಗುವ ರೀತಿಯಲ್ಲಿ ಈ ಪೋರ್ಟಲ್ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಪೋರ್ಟಲ್ ವಿನ್ಯಾಸಕ್ಕೆ ಟೆಂಡರ್ ಕೂಡ ಆರಂಭಿಸಲಾಗಿದೆ ಎನ್ನುತ್ತವೆ ಬಿಡಿಎ ಮೂಲಗಳು.

Vijayakaranataka Pg.08

WHAT TO GROW IN RAINS

Here is what you should grow this season, divided by sunlight levels and regional climates



Dr Ekta Chaudhary
The writer is a leading expert in urban landscaping and plant ecology

Q THE GREEN MANUAL

THE arrival of the monsoon is a magical time for plant lovers. The high humidity and consistent moisture act as a natural booster for foliage. However, successful monsoon gardening requires understanding your specific microclimate. Before diving into plant varieties, there is one golden rule for planting in the rainy season: efficient drainage. Stagnant, waterlogged soil causes root rot. Here is what you should grow this season, divided by sunlight levels and regional climates.

Low-light & heavy rain spaces (no direct sun)

If your region experiences heavy downpours and thick cloud cover – characteristic of landscaping in Mumbai or shaded balconies during the monsoons of Bengaluru – you likely struggle with a complete lack of direct sunlight. Don't worry; these shade-loving, humidity-obsessed plants will thrive.

- **Climbers and creepers:** Aroids respond beautifully to the monsoons. Money plants, Philodendrons, and any structural creeper will put out rapid new growth. If your space gets sun throughout the rest of the year but goes dark during the rains, this is the perfect time to establish flowering creepers. Top industry recommendations for the best climbing plants include Madhumalti (Rangoon Creeper), Thunbergia and Cat's Claw.
- **Large-leaf tropicals:** Monsoon humidity mimics the natural rainforest environment that Monsteras love. Even rare, investment varieties like a variegated Monstera will flourish now if given bright, indirect light. Other options for low-sun areas include Xanadu, Areca Palm and Parlour Palm.

Sunny & moderate rain areas (3-4 hours of sun)

If you live in moderate-rain or sparse-rain regions – such as Delhi, Jaipur or even the warm monsoon days of Hyderabad – you will still get a decent amount of sun alongside the seasonal showers.

- **Lush ferns:** For gorgeous North Indian indoor plants and cool Bengaluru gardens, try ferns during the rainy season. You can easily enjoy a burst of vibrant green for the 2-3 months of the monsoon. The top performers are Boston fern, Sword fern and Maidenhair fern.
- **Architectural palms:** For outdoor spaces, terraces and open lawns, the rainy season provides the perfect environment for larger palms to establish deep root systems before the dry season. Areca palm works brilliantly, while landscape architects designing luxury terraces in Hyderabad and Delhi highly favour statement trees like the Foxtail palm and Date palm.
- **Resilient ficus & flowering hedges:** High-sun areas are ideal for the Ficus family. Varieties like Ficus benjamina (Weeping Fig) and Ficus microcarpa adapt incredibly well. Across India, Ficus species are regarded as the absolute best hedge plants because they grow densely and rapidly under the monsoon sky.
- **Pro plant maintenance tip:** During the monsoon, step back and let nature take its course. Avoid heavy pruning while it is actively pouring. Let your plants grow wild and soak up the nitrogen-rich rainwater, then give them a deep, structural trim post-monsoon to shape them for the upcoming season.

Indian Exp. Pg.Spl.03

'ಅಣಬೆ ಬೇಸಾಯದಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯ'

ಸಂ.ಕ. ಸಮಾಚಾರ, ರಾಮನಗರ

ಸ್ವ–ಉದ್ಯೋಗ ಕೈಗೊಂಡು ಆರ್ಥಿಕವಾಗಿ ಸಬಲರಾಗಲು ಅಣಬೆ ಬೇಸಾಯದಂತಹ ತರಬೇತಿ ಶಿಬಿರಗಳು ಉತ್ತಮ, ಬಂಧಿ ನಿವಾಸಿಗಳು ಇದರ ಪ್ರಯೋಜನ ಪಡೆದು ಮುಂದಿನ ಜೀವನವನ್ನು ಉತ್ತಮವಾಗಿ ನಡೆಸಬಹುದಾಗಿದೆ ಎಂದು ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಮೋಹನ್ ಕುಮಾರ್ ಹೇಳಿದರು.

ಅವರು ಹಾರೋಹಳ್ಳಿಯ ಕೆನರಾಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕಾರಾಗೃಹ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ನಗರದ ಜಿಲ್ಲಾ ಕಾರಾಗೃಹದಲ್ಲಿ ಬಂಧಿ ನಿವಾಸಿಗಳಿಗಾಗಿ ಆಯೋಜಿಸಲಾಗಿದ್ದ 10 ದಿನಗಳ ಅಣಬೆ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಧಾನಮಂತ್ರಿ ಜೀವನ ಜ್ಯೋತಿ ಬೀಮಾ, ಪ್ರಧಾನ ಮಂತ್ರಿ ಸುರಕ್ಷಾ ಯೋಜನೆಯಲ್ಲಿ ವಿಮೆದಾರರಾಗುವಂತೆ ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತೆ ಪದ್ಮರೇಖಾ, ಕೆನರಾಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ಸಮ್ಮೇದ ಹಾರೋಗೇರಿ, ಜಿಲ್ಲಾ ಕಾರಾಗೃಹದ ಪ್ರಭಾರ ಅಧೀಕ್ಷಕರಾದ ಇಮಾಮ್ ಖಾಸಿಂ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ರವಿರಾಜ್ ಎಚ್.ಜಿ, ಜೈಲರ್ ಮಂಜುಳಾ, ಕೆನರಾಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯ ಉಪನ್ಯಾಸಕ ದೇವಿಂದ್ರ ಪ್ರಸಾದ್ ಮಾತನಾಡಿದರು.



Samyuktha Karnataka Pg.4B